## ಮಹಾತ್ಮ ಗಾಂಧಿ : (ಜನನ-ಅಕ್ಟೋಬರ್ ೨, ೧೮೬೯)

ಅಹಿಂಸೆಯ ಪ್ರತಿಪಾದಕ, ಶಾಂತಿ ಸಂದೇಶಕ, ಸತ್ಯ ನಿಷ್ಠುರಿ, ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಹುಟ್ಟಿದ್ದು ೧೮೬೯ರ ಅಕ್ಟೋಬರ್ ೨ರಂದು ಗುಜರಾತಿನ ಪೋರಬಂದರಿನಲ್ಲಿ(ಸುಧಾಮಪುರಿ). ಬಾಪೂಜಿ ಎಂಬ ಪ್ರೀತಿಯ ಹೆಸರಿನ ಮೋಹನದಾಸ ಕರಮಚಂದ ಗಾಂಧೀಜಿಯು ತಮ್ಮ ಅಭೂತಪೂರ್ವ ಸಾಧನೆಯಿಂದಾಗಿ ಮಹಾತ್ಮಾ ಎಂದೇ ಪೂಜ್ಯನೀಯರಾದರು. ಸಾರ್ವಭೌಮಾಧಿಕಾರದ ಬ್ರಿಟಿಷರನ್ನು ಬರಿಗೈಯಲ್ಲಿ ಎದುರಿಸಿದರು. ತಮ್ಮ ಹೋರಾಟದ ಚಳುವಳಿಗೆ ಸತ್ಯ, ನ್ಯಾಯ, ಧರ್ಮಗಳನ್ನು ಊರಗೋಲುಗಳನ್ನಾಗಿ ಬಳಸಿದರು. ತತ್ವಬದ್ಧರಾಗಿ ಅಹಿಂಸೆಯ ಮೂಲಕ ಸ್ವಾತಂತ್ರ್ಯವನ್ನು ಒದಗಿಸಿ, ಭಾರತದ ಭಾಗ್ಯವಿಧಾತ ಎನಿಸಿಕೊಂಡರು.

ಬಾಪೂಜಿ ತಮ್ಮ ಆತ್ಮಕಥೆಯನ್ನು 'ನನ್ನ ಸತ್ಯಾನ್ವೇಷಣೆ' (The Story of my Experiments with Truth) ಎಂಬ ಹೆಸರಿನಲ್ಲಿ ಯಾವುದೇ ಮುಚ್ಚು ಮರೆಯಿಲ್ಲದೆ ತಮ್ಮೆಲ್ಲಾ ಜೀವನದ ಘಟನಾವಳಿಗಳನ್ನು ತೆರೆದ ಪುಸ್ತಕದಂತೆ ನೈಜವಾಗಿ ಬರೆದು ಹೆಸರಾದರು. ಉಪ್ಪಿನ ಸತ್ಯಾಗ್ರಹ ನಡೆಸಿ, ಬ್ರಿಟಿಷರೆ ಭಾರತ ಬಿಟ್ಟು ತೊಲಗಿ ಎಂದು ಘೋಷಿಸಿದರು. ಚರಕ ಹಿಡಿದು, ಖಾದಿ ಬಳಸಿದರು. ಸ್ವದೇಶಿ ನೆಲೆಯಿಂದ ಸ್ವಾಭಿಮಾನದ ಶಾಂತಿ ಚಳುವಳಿಯ ಮೂಲಕ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರು. 'ಹಿಂದ ಸ್ವರಾಜ್' ಕೃತಿ ರಚಿಸಿ ಸ್ವದೇಶಿ ಚಿಂತನೆ ಹುಟ್ಟುಹಾಕಿದರು. 'ಹರಿಜನ' ಪತ್ರಿಕೆಯನ್ನು ಮಾದರಿಯಾಗಿ ರೂಪಿಸಿಕೊಟ್ಟು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಪ್ರಯತ್ನಿಸಿದರು. ರಾಮ-ರಹೀಮ, ಈಶ್ವರ-ಅಲ್ಲಾ ನಾಮಗಳನ್ನು ಪಠಿಸಿ ಕೋಮು ಸಾಮರಸ್ಯವನ್ನು ಸಾರಿದರು. ಇಂತಹ ಮಹಾನ್ ಚೇತನಕ್ಕೆ ಹಣೆಮಣಿದು ಮಹಾತ್ಮನ ಹುಟ್ಟುಹಬ್ಬವನ್ನು ಆಚರಿಸೋಣ ಕನ್ನಡ ವಿಶ್ವವಿದ್ಯಾಲಯಕ್ಕೆ ಬನ್ನಿ.

## ಲಾಲ ಬಹಾದ್ದೂರ ಶಾಸ್ತ್ರಿ : (ಜನನ-ಅಕ್ಟೋಬರ್ ೨, ೧೯೦೪)

ಲಾಲ ಬಹಾದ್ದೂರರು ಮುಘಲ್ ಸರಾಯಿ ಎಂಬ ಹಳ್ಳಿಯಲ್ಲಿ ೧೯೦೪ರ ಅಕ್ಟೋಬರ್ ೨ರಂದು ಜನಿಸಿದರು. ನೆಹರು ತರುವಾಯ ಸ್ವತಂತ್ರ ಭಾರತದ ಪ್ರಧಾನಿಯಾಗಿ ಪೂರ್ಣ ಯಶಸ್ಸು ಗಳಿಸಿದವರು ಲಾಲ ಬಹಾದ್ದೂರರು. ೧೯೨೬ರಲ್ಲಿ ಕಾಶಿ ವಿದ್ಯಾಪೀಠದಿಂದ 'ಶಾಸ್ತ್ರಿ' ಎಂಬ ಪದವಿಯನ್ನು ಪಡೆದು, ಆ ಪದವಿಯನ್ನೇ ಅಭಿನಾಮವಾಗಿ ಹೊಂದಿ ಪ್ರಸಿದ್ಧರಾದರು. ಶಾಸ್ತ್ರಿಯವರು ಉಪ್ಪಿನ ಸತ್ಯಾಗ್ರಹದಲ್ಲಿ(೧೯೩೦) ಪ್ರಮುಖ ಪಾತ್ರ ವಹಿಸಿದ್ದರು. ಸತತವಾಗಿ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿದ್ದರಿಂದಾಗಿ ಬ್ರಿಟಿಷರ ಕೋಪಕ್ಕೆ ತುತ್ತಾಗಿ ಏಳು ಬಾರಿ ಶಿಕ್ಷೆಗೊಳಗಾಗಿ ಒಂಭತ್ತು ವರ್ಷಗಳ ಕಾಲ ಸೆರೆವಾಸ ಅನುಭವಿಸಿದವರು.

ಸ್ವತಂತ್ರ ಭಾರತದಲ್ಲಿ ತಮ್ಮ ಆಡಳಿತ ಸಂಘಟನಾ ಚಾತುರ್ಯದಿಂದ ಕೇಂದ್ರ ಸರ್ಕಾರದಲ್ಲಿ ಒಂದಾದ ಮೇಲೊಂದು ಮಂತ್ರಿ ಸ್ಥಾನಗಳನ್ನು ಪಡೆದು, ಸತತವಾಗಿ ಹದಿನೇಳು ವರ್ಷ ದಕ್ಷ ಆಡಳಿತಗಾರರಾಗಿ ಕಾರ್ಯ ನಿರ್ವಹಿಸಿದರು. ೧೯೬೪ರಲ್ಲಿ ತೆರವಾದ ಭಾರತದ ಪ್ರಧಾನಿ ಪಟ್ಟವನ್ನು ವಹಿಸಿಕೊಂಡರು. ತಮ್ಮ ಆಡಳಿತಾವಧಿಯಲ್ಲಿ ಚುಟುಕಾಣಿ ಲಾಲ ಬಹಾದ್ದೂರರು ವಿಶ್ವದ ಎಲ್ಲಾ ರಾಷ್ಟ್ರಗಳನ್ನು ಒಲಿಸಿಕೊಳ್ಳುತ್ತಾ, ಕಾಶ್ಮೀರವನ್ನು ಕಬಳಿಸಲು ಪ್ರಯತ್ನಿಸಿದ ಪಾಕಿಸ್ತಾನವನ್ನು ಸಮರ್ಥವಾಗಿ ಎದುರಿಸಿ ಹತೋಟಿಯಲ್ಲಿ ತಂದರು. ಸೋವಿಯತ್ ಪ್ರಧಾನಿ ಕೊಸಗಿನ್‌ರ ಆಹ್ವಾನದಂತೆ ಭಾರತ-ಪಾಕಿಸ್ತಾನ ಪ್ರಧಾನಿಗಳು ಸೇರಿ 'ಒಪ್ಪಂದಕ್ಕಾಗಿ ಸಹಿ' ಹಾಕಿದರು. ಕೊನೆಗೂ ೧೯೬೬ರಲ್ಲಿ ಆಕಸ್ಮಿಕವಾಗಿ ರಾತ್ರಿ ಮಲಗಿದವರು ಮತ್ತೆ ಎದ್ದೇಳದೆ ಚಿರಕಾಲ ನಿದ್ರೆಗೆ ಸೇರಿಹೋದರು. ಆದರೆ ಅವರ ಹೇಳಿಕೊಟ್ಟ " ಜೈ ಜವಾನ್, ಜೈ ಕಿಸಾನ" ಮಂತ್ರ ಮಾತ್ರ "ಸಬಲವಾದ ಸೈನ್ಯ ಮತ್ತು ಪ್ರಬಲವಾದ ಕೃಷಿ" ಭಾರತದ ಬೆನ್ನೆಲುಬು ಎಂಬ ಸಂದೇಶದ ವಾಕ್ಯ ಇಂದಿಗೂ ಅವರ ನೆನೆಪಿನೊಂದಿಗೆ ಹಸಿರಾಗಿ ಉಳಿದಿದೆ. ಇಂತಹ ಅಪೂರ್ವ ಚೈತನ್ಯಕ್ಕೆ ಜನ್ಮದಿನವನ್ನು ಹಾರ್ದಿಕವಾಗಿ ಆಚರಿಸಲು ಕನ್ನಡ ವಿಶ್ವವಿದ್ಯಾಲಯಕ್ಕೆ ಬನ್ನಿ.